**ಶ್ರೀಮತಿ ಹೇಮಲತಾ ನಾಯಕ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ದಿನಾಂಕ:06.03.2025ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಹೇಳಿಕೆ**

**ವಿಷಯ:** ನವಲಿ ಜಲಾಶಯ ಭಾಷಣಕ್ಕೆ ಸೀಮಿತ ತುಂಗಭದ್ರಾ ಜಲಾಶಯದ ನೀರು ವ್ಯರ್ಥವಾಗಿ ಹರಿದು ಹೋಗದಂತೆ ತಡೆಯಲು ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ. ಆದರೆ ಈ ವಿಷಯ ಕಳೆದ ಒಂದೂವರೆ ದಶಕದಿಂದ ಕೇವಲ ರಾಜಕಾರಣಿಗಳ ಭಾಷಣ ಮಾತುಕತೆಗೆ ಸೀಮಿತವಾಗಿದ್ದು ಬೇಡಿಕೆ ಮಾತ್ರ ಈಡೇರುತ್ತಿಲ್ಲ. ತುಂಗಭದ್ರಾ ಡ್ಯಾಂನಲ್ಲಿ 30 ಟಿಎಂಸಿ ಅಡಿಗಿಂತ ಹೆಚ್ಚು ಹೂಳು ತುಂಬಿರುವ ಕಾರಣ ಪೂರ್ಣವಾಗಿ ನವಲಿ ಬಳಿ ಹೊಸ ಸಮಾನಾಂತರ ಜಲಾಶಯ ನಿರ್ಮಾಣ ಮಾಡುವುದಾಗಿ ದಶಕಗಳ ಹಿಂದೆ ಆಗಿನ ರಾಜ್ಯ ಕಾಂಗ್ರೆಸ್ ಸರ್ಕಾರ ಹೇಳಿತ್ತು ಅನುದಾನ ನೀಡುವುದಾಗಿಯೂ ಘೋಷಿಸಿತ್ತು ರೂ.9,000 ಕೋಟಿ ಹಾಗೂ ರೂ.15,000 ಕೋಟಿ 2-DPR ತಯಾರಿಸಿತ್ತು ನಂತರ 2020ರಲ್ಲಿ ಬಿಜೆಪಿ ಸರ್ಕಾರ ಈ ಯೋಜನೆಗಾಗಿ ರೂ.13,000 ಕೋಟಿ ಮೊತ್ತದ ಸಮಗ್ರ ಯೋಜನಾ ವರದಿ DPR ಸಿದ್ಧಪಡಿಸಿತ್ತು. ಆದರೆ ಯೋಜನೆ ಮಾತ್ರ ಕಾರ್ಯರೂಪಕ್ಕೆ ಬಂದಿಲ್ಲ, ಇದಕ್ಕೆ ರಾಜಕೀಯ ನಾಯಕರ ಇಚ್ಛಾಶಕ್ತಿ ಕೊರತೆ ಕೂಡ ಇದೆ. ತುಂಗಭದ್ರಾ ಜಲಾಶಯ ಪ್ರಸ್ತುತ ಒಟ್ಟು 105.78 TMC ಅಡಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ ತುಂಬಿದ ಬಳಿಕ ಪ್ರತಿಬಾರಿಯೂ ವ್ಯರ್ಥ್ಯವಾಗಿ ನದಿಗೆ ನೀರು ಹರಿದು ಹೋಗುವ ಪ್ರಮಾಣ ಹೆಚ್ಚಾಗುತ್ತಿದೆ. ಕರ್ನಾಟಕ, ಆಂಧ್ರಪ್ರದೇಶ್ ಮತ್ತು ತೆಲಂಗಾಣ ರಾಜ್ಯಗಳು ತುಂಗಭದ್ರಾ ನೀರಿನಲ್ಲಿ ಪಾಲು ಹೊಂದಿರುವುದು ಇದರಿಂದ ರಾಜ್ಯ ಸರ್ಕಾರ ಉಳಿದೆರಡು ರಾಜ್ಯಗಳ ಜೊತೆ ಸಂಬಂಧ ಮಾಹಿತಿ ಸಾಧಿಸಿ ಯೋಜನೆ ಆರಂಭಿಸಬೇಕಾಗಿದೆ. ತುಂಗಭದ್ರಾ ಜಲಾಶಯದಲ್ಲಿ 19ನೇ ಗೇಟ್ ಟ್ರೈಮ್ ಲಿಂಕ್ ತುಂಡಾಗಿ ಲಕ್ಷಾಂತರ ಕಿಶೋಕನೀರು ಪೋಲಾಯಿತು ಒಂದು ವೇಳೆ ಸಮಾಂತರ ಜಲಾಶಯ ನಿರ್ಮಿಸಿದ್ದರೆ ಒಂದಷ್ಟು ನೀರನ್ನು ಉಳಿಸಿಕೊಳ್ಳಲು ಅವಕಾಶವಿತ್ತು ಎನ್ನುವುದು ರೈತರ ವಾದವಾಗಿದೆ. ವ್ಯರ್ಥವಾಗಿ ಹರಿದಾಗ ನೆನಪು ಪ್ರತಿ ಬಾರಿ ಡ್ಯಾಂ ತುಂಬಿ ನೀರು ವ್ಯರ್ಥವಾಗಿ ಹರಿಯುವಾಗಲೆಲ್ಲಾ ಸಮಾನಾಂತರ ಜಲಾಯದ ಚರ್ಚೆ ಮುನ್ನಡೆಗೆ ಬರುತ್ತದೆ ದಶಕದ ಹಿಂದಿನ ಯೋಜನೆ ಆರಂಭವಾಗಿದ್ದರೆ ಈ ಭಾಗದಲ್ಲಿ ಮಳೆ ಕೊರತೆಯಿದ್ದಾಗ ಕೃಷಿ ಚಟುವಟಿಕೆಗೆ ನೀರಿನ ತೊಂದರೆ ತಪ್ಪುತ್ತಿತ್ತು. ಆದರೆ ಇವರಿಗೆ ನವಲಿ ಬಳಿ ಜಲಾಶಯ ನಿರ್ಮಾಣ ಕೇವಲ DPR ತಯಾರಿಸುವುದರಲ್ಲಿಯೇ ದಶಕಗಳೇ ಮುಗಿದಿವೆ. ಇನ್ನು ಆಂಧ್ರ, ತೆಲಂಗಾಣ ರಾಜ್ಯಗಳ ಸಿ.ಎಂಗಳ ಜೊತೆ ಚರ್ಚೆ ಮಾಡುವುದಾಗಿ ಹೇಳಿಯೂ 5 ವರ್ಷ ಕಳೆದಿದೆ ಇತರ ಜಲಾಶಯಗಳ ಬಗ್ಗೆ ಇರುವ ಕಾಳಜಿ ತುಂಗಭದ್ರಾ ಜಲಾಶಯದ ಬಗ್ಗೆ ಇಲ್ಲ, ಸಿಂಧನೂರು ತಾಲ್ಲೂಕಿನಲ್ಲಿ ಸುಮಾರು 40 ಸಾವಿರ ಎಕರೆ ಪ್ರದೇಶ ಬೇಸಿಗೆ ಬೆಳೆಯ ಭತ್ತ ಪೂರ್ಣ ಪ್ರಮಾಣದ ನೀರು ಹರಿಸಿಕೊಳ್ಳದೆ ಪ್ರತಿ ವರ್ಷ ನಷ್ಟ ಅನುಭವಿಸಬೇಕಿದೆ ಇನ್ನು 5-TMC ನೀರು ಸಹ ಸಂಗ್ರಹವಾದರೆ, ಇಲ್ಲಿನ ಸಮಸ್ಯೆಗೆ ಪರಿಹಾರ ಸಿಗಲಿದೆ. ಇನ್ನೂ ಮಾನ್ವಿ, ಸಿರವಾರ, ಮಸ್ಕಿ ಹಾಗೂ ರಾಯಚೂರು ಭಾಗಕ್ಕೂ ನೀರಿನ ಸಮಸ್ಯೆ ಇದೆ. ತುಂಗಭದ್ರಾ ಜಲಾಶಯದಿಂದ ವ್ಯರ್ಥವಾಗಿ ಹರಿಯುವ ನೀರು ತಡೆದಿಟ್ಟುಕೊಳ್ಳಲು ನವಲಿ ಜಲಾಶಯ ನಿರ್ಮಾಣವಷ್ಟೇ ಪರಿಹಾರ, ಆದರಿಂದ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೋರಿರುವ ಕುರಿತು.

*****

ತುಂಗಭದ್ರಾ ಯೋಜನೆಯನ್ನು 1945 ರಲ್ಲಿ ಪ್ರಾರಂಭಿಸಿ 1953 ರಲ್ಲಿ ಪೂರ್ಣಗೊಂಡಿದ್ದು, ಮೂಲ ಯೋಜನೆಯಂತೆ ಜಲಾಶಯದ ಗರಿಷ್ಠ ಸಂಗ್ರಹಣ ಸಾಮರ್ಥ್ಯ 132.47 ಟಿ.ಎಂ.ಸಿ. ಇರುತ್ತದೆ. ಸದರಿ ಯೋಜನೆಯಿಂದ ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯದ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. 2016ರ ಹೈಡ್ರೋಗ್ರಾಫಿಕ್ ಸರ್ವೆ ಪ್ರಕಾರ ಜಲಾಶಯದಲ್ಲಿ ಸುಮಾರು 26 TMC ಹೂಳು ಸಂಗ್ರಹವಾಗಿರುವುದರಿಂದ, ಪ್ರಸ್ತುತ, ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯ 105.788 TMC ಇರುತ್ತದೆ.

ಸದರಿ ಯೋಜನೆಗೆ ಒಟ್ಟಾರೆಯಾಗಿ 230 ಟಿ.ಎಂ.ಸಿ (18 ಟಿ.ಎಂ.ಸಿ ಭಾಷ್ಪೀಕರಣ ಸೇರಿದಂತೆ) ನೀರಿನ ಹಂಚಿಕೆಯಾಗಿರುತ್ತದೆ. ಜಲಾಶಯದಲ್ಲಿ ಹೂಳು ತುಂಬಿರುವುದರಿಂದ ಜಲಾಶಯದ ಸಂಗ್ರಹಣಾ

ಸಾಮರ್ಥ್ಯ ಕಡಿಮೆಯಾಗಿರುವುದು, ಜಲಾಶಯಕ್ಕೆ ಭಾರಿ ಪ್ರಮಾಣದ ಒಳಹರಿವು ಏಕಾಏಕಿ ಅಲ್ಪಾವಧಿ ಸಮಯದಲ್ಲಿ (ಸಾಮಾನ್ಯವಾಗಿ ಜುಲೈ ತಿಂಗಳ ಅಂತ್ಯದಲ್ಲಿ ಮತ್ತು ಆಗಸ್ಟ್ ತಿಂಗಳಿನಲ್ಲಿ) ಹರಿದು ಬಂದು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗದೆ ಇರುವುದರಿಂದ, ಬಹುತೇಕ ವರ್ಷಗಳಲ್ಲಿ ಹಂಚಿಕೆ ಮಾಡಿದ ನೀರಿನ ಪ್ರಮಾಣವನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ, ಕೊಪ್ಪಳ ಜಿಲ್ಲೆಯ ನವಲಿ ಗ್ರಾಮದ ಹತ್ತಿರ ಸಮನಾಂತರ ಜಲಾಶಯ ನಿರ್ಮಿಸಲು ಪ್ರಸ್ತಾಪಿಸಲಾಗಿರುತ್ತದೆ. ಸದರಿ ಯೋಜನೆಯು ಅಂತರ ರಾಜ್ಯ ಯೋಜನೆಯಾಗಿರುವುದರಿಂದ, ನವಲಿ ಸಮಾನಾಂತರ ಜಲಾಶಯ ನಿರ್ಮಾಣ ಯೋಜನೆಗೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಮತ್ತು ತುಂಗಭದ್ರಾ ಮಂಡಳಿಯ ಸಹಮತಿ ಅಗತ್ಯವಿರುತ್ತದೆ.

ಆದ್ದರಿಂದ, ನವಲಿ ಸಮಾನಾಂತರ ಜಲಾಶಯ ನಿರ್ಮಾಣ ಯೋಜನೆಯ ರೂ.15,601.00 ಕೋಟಿ ಮೊತ್ತದ (2022-23 ದರಪಟ್ಟಿಯನ್ವಯ) ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿ, ದಿನಾಂಕ:06.02.2024 ರಂದು ತುಂಗಭದ್ರಾ ಮಂಡಳಿಗೆ ಕಳುಹಿಸಲಾಗಿದ್ದು, ಸದರಿ ವಿಷಯವಾಗಿ ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಪ್ರತಿಕ್ರಿಯೆಯನ್ನು ಪರಿಶೀಲಿಸಿ, ಮುಂದಿನ ಸಭೆಗಳಲ್ಲಿ ಚರ್ಚಿಸಲು ದಿನಾಂಕ:22.11.2024 ರಂದು ಜರುಗಿದ ತುಂಗಭದ್ರಾ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಮುಂದುವರೆದು, ಸದರಿ ಯೋಜನೆಯ ಕುರಿತು ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಲು ಸಭೆ ನಡೆಸುವ ಸಂಬಂಧ ದಿನಾಂಕ:22.06.2023, 10.01.2024, 05.07.2024 & 21.11.2024 ರಂದು ಸದರಿ ರಾಜ್ಯಗಳಿಗೆ ಪತ್ರಗಳನ್ನು ಬರೆಯಲಾಗಿದೆ. ಅಲ್ಲದೆ, ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಮಾನ್ಯ ಮುಖ್ಯಮಂತ್ರಿಯವರುಗಳೊಂದಿಗೆ ಚರ್ಚಿಸುವ ಸಂಬಂಧ ಸಮಯ ಕೋರಿ, ಮಾನ್ಯ ಉಪಮುಖ್ಯಮಂತ್ರಿಯವರಿಂದ ಎರಡೂ ರಾಜ್ಯಗಳ ಮಾನ್ಯ ಮುಖ್ಯಮಂತ್ರಿಯವರುಗಳಿಗೆ ದಿನಾಂಕ:14.02.2025 ರಂದು ಬರೆಯಲಾಗಿದ್ದು, ಪ್ರತಿಕ್ರಿಯೆ ನಿರೀಕ್ಷಿಸಲಾಗಿದೆ.

ಈ ಮಧ್ಯೆ, ದಿನಾಂಕ:10.08.2024 ರಂದು ತುಂಗಭದ್ರಾ ಅಣೆಕಟ್ಟೆಯ Spillway gate No.19 mechanical failureನಿಂದಾಗಿ ಕೊಚ್ಚಿಹೋಗಿದ್ದು, ತಾತ್ಕಾಲಿಕವಾಗಿ stop log gateಅನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ತಯಾರಿಸಿ, ಹೆಚ್ಚಿನ ನೀರು ವ್ಯರ್ಥವಾಗದಂತೆ, ಒಂದು ವಾರದಲ್ಲಿಯೇ stoplog gate ಅಳವಡಿಕೆ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಪ್ರಸ್ತುತ ಜಲವರ್ಷದ ಪ್ರಾರಂಭದಲ್ಲಿಯೇ ಅನಿರೀಕ್ಷಿತವಾಗಿ ಎದುರಾದ ತುರ್ತುಪರಿಸ್ಥಿತಿಯ ಸಮಸ್ಯೆಯನ್ನು ಸಮರ್ಥವಾಗಿ ನಿರ್ವಹಿಸಲಾಗಿದೆ. ತುಂಗಭದ್ರಾ ಜಲಾಶಯಕ್ಕೆ ತದನಂತರ, ಜಲಾಶಯಕ್ಕೆ ನಿರೀಕ್ಷಿತ inflow ಬಂದಿದ್ದು, ಲಭ್ಯವಾದ ನೀರಿನ್ನು ಪರಿಗಣಿಸಿ, ನೀರಾವರಿ ಸಲಹಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸಿರುವಂತೆ ಹಿಂಗಾರು ಹಂಗಾಮಿನ ಬೆಳೆಗಳಿಗೆ ನೀರೊದಗಿಸಲಾಗುತ್ತಿದೆ.

ತುಂಗಭದ್ರಾ ಜಲಾಶಯದಲ್ಲಿ ಹೂಳಿನ ಸಂಗ್ರಹಣೆಯಿಂದ ನೀರಿನ ಸಂಗ್ರಹಣೆಯಲ್ಲಿನ ಕೊರತೆಯನ್ನು ನೀಗಿಸಲು ಪರ್ಯಾಯ ಮಾರ್ಗೋಪಾಯಗಳ ಬಗ್ಗೆ ನೆರೆ ರಾಜ್ಯಗಳೊಂದಿಗೆ ಸಮಾಲೋಚಿಸಿ, ಪರಿಹಾರ ಕಂಡುಕೊಳ್ಳುವ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಗತ್ಯ ಎಲ್ಲಾ ಕ್ರಮಕೈಗೊಳ್ಳುತ್ತಿದೆ.

**ಸಂಖ್ಯೆ:ಜಸಂಇ 38 ಎಂಎಲ್ಎ 2025**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿ**